ಎಷ್ಟು ಜನಸಂಖ್ಯೆಗೆ ಎಷ್ಟು ಹಣವನ್ನು ನಾವು ಕೊಟ್ಟಿದ್ದೇವೆ ಎನ್ನುವುದನ್ನು ತಮ್ಮ ಗಮನಕ್ಕೆ ತರುವಂಥ ಕೆಲಸವನ್ನು ಮಾಡಿದ್ದೇವೆ. ಪಂಚಾಯತ್ ರಾಜ್ ಇಲಾಖೆಯಿಂದ ಒಂದು ಸಾವಿರ ಕೋಟಿ ರೂಪಾಯಿಗಳನ್ನು ಖರ್ಚು ಮಾಡುವುದರ ಜೊತೆಗೆ ಇನ್ನುಳಿದ ಇಲಾಖೆಗಳಿಂದ ಕೂಡ ಅನುದಾನವನ್ನು ಪಡೆದುಕೊಂಡು ಅಭಿವೃದ್ಧಿ ಮಾಡುವುದರ ಬಗ್ಗೆ ಯೋಜನೆಯನ್ನು ಮಾಡಿ ಕ್ರಮ ಕೈಗೊಳ್ಳಬೇಕೆನ್ನುವ ಪ್ರಸ್ತಾಪಕ್ಕೆ ಪ್ರಸ್ತಾವನೆಯನ್ನು ಸಲ್ಲಿಸಬೇಕೆಂದು ನಾವು ಸೂಚನೆಯನ್ನು ಕೊಟ್ಟಿದ್ದೇವೆ. ಅದಕ್ಕೆ ಸಂಪೂರ್ಣವಾಗಿ ನನ್ಮ ಇಲಾಖೆಯಿಂದ ಬಜೆಟ್‌ನಲ್ಲಿ ಏನು ಹಣವಿದೆ ಅದರ ಜೊತೆ ಜೊತೆಯಲ್ಲಿಯೇ ವಿವಿಧ ಇಲಾಖೆಗಳಿಂದ ಹಣ ಪಡೆಯಬೇಕು ಎನ್ನುವಂಥ ವಿಚಾರ ನಮ್ಮದಾಗಿದೆ. ಇದು ಏಕಕಾಲದಲ್ಲಿ ಒಂದೇ ವರ್ಷದಲ್ಲಿ ಎಲ್ಲವೂ ಮುಗಿಯುತ್ತದೆಂದು ಹೇಳುವುದಕ್ಕಾಗುವುದಿಲ್ಲ. ಆದರೆ ಸಮಗ್ರ ಅಭಿವೃದ್ಧಿ ಯೋಜನೆಯಲ್ಲಿ ಮಾಡಿದಾಗ ಉಳಿದ ಎಲ್ಲಾ ಇಲಾಖೆಗಳಿಂದ ಹಣವನ್ನು ಕ್ರಮೇಣ ಪಡೆದು ಅದರಲ್ಲಿ ವಿಸ್ತೀರ್ಣಗೊಳಿಸಬೇಕು ಎನ್ನುವ ಉದ್ದೇಶದಿಂದ ಈ ಕಾರ್ಯಕ್ರಮವನ್ನು ರೂಪಿಸಿದ್ದೇವೆ. ಆ ಪ್ರಕಾರ 47 ಲಕ್ಷ ರೂಪಾಯಿಗಳನ್ನು ಹಣ ವಿಂಗಡಣೆ ಮಾಡಬೇಕೆನ್ನುವಂಥ ಸಂದರ್ಭದಲ್ಲಿ ಗ್ರಾಮದ ಜನಸಂಖ್ಯೆಯನ್ನು ಗಮನದಲ್ಲಿಟ್ಟುಕೊಂಡು ಅವರು ಮಾಡಿದ್ದಾರೆ ಎನ್ನುವಂಥ ಭಾವನೆ ನನಗಿದೆ. ಅದನ್ನು ಎಲ್ಲಾ ಕಡೆಯಲ್ಲಿಯೂ ನಾವು ಈ ರೀತಿಯಾಗಿ ಮಾಡಿದ್ದೇವೆ.

(11) ವಿಷಯ: ಚಿಕ್ಕೋಡಿ ತಾಲ್ಲೂಕಿನಲ್ಲಿ 40 ಟ್ರಾನ್ಸ್‌ಫಾರ್ಮರ್‌ಗಳು ಸುಟ್ಟು ಹೋಗಿರುವ ಬಗ್ಗೆ :

ಶ್ರೀ ಪ್ರಕಾಶ್ ಬಿ.ಹುಕ್ಕೇರಿ:– ಮಾನ್ಯ ಅಧ್ಯಕ್ಷರೆ, ನಮ್ಮ ಚಿಕ್ಕೋಡಿ ತಾಲ್ಲೂಕಿನಲ್ಲಿ 40 ಟ್ರಾನ್ಸ್‌ಫಾರ್ಮರ್‌ಗಳು ಕಳೆದ ಒಂದು ವರ್ಷದಿಂದ ಸುಟ್ಟು ಹೋಗಿವೆ. ಇಲ್ಲಿಯವರೆಗೆ ಅವುಗಳನ್ನು ರೀಪ್ಲೇಸ್ ಮಾಡುವುದಕ್ಕೆ ಅಧಿಕಾರಿಗಳು ತಯಾರಿಲ್ಲ. ನಮ್ಮ ಜಿಲ್ಲಾ ಉಸ್ತುವಾರಿ ಸಚಿವರು ಬೆಳಗಾಂಗೆ ಬಂದಾಗ ಚಿಕ್ಕೋಡಿಯೊಳಗೆ ಮೀಟಿಂಗ್ ತೆಗೆದುಕೊಂಡಾಗ ಸಂಬಂಧಪಟ್ಟ ಅಧಿಕಾರಿಗಳು ಕೂಡ ಹೇಳಿದರು. ತಕ್ಷಣ ಸದಲಗ ಕ್ಷೇತ್ರಕ್ಕೆ 60 ಮತ್ತು 63 ಮತ್ತು 100 ಕೆ.ವಿ. ಟ್ರಾನ್ಸ್‌ಫಾರ್ಮರ್‌ಗಳನ್ನು ರೀಪ್ಲೇಸ್ ಮಾಡಬೇಕೆಂದು ಹೇಳಿದರೂ ಕೂಡ ಇದುವರೆವಿಗೂ ರೀಪ್ಲೇಸ್ ಮಾಡಿಲ್ಲ. ನಮಗೆ

ಟ್ರಾನ್ಸ್‌ಫಾರ್ಮರ್ ಹಾಕಿಕೊಡಿ, ನಮಗೆ ಟ್ರಾನ್ಸ್‌ಫಾರ್ಮರ್ ಹಾಕಿಕೊಡಿ ಎಂದು ರೈತರುಗಳು ಕಳೆದ ಒಂದು ವರ್ಷದಿಂದ ಆಫೀಸ್‌ನಿಂದ ಆಫೀಸ್‌ಗೆ ತಿರುಗಾಡುತ್ತಿದ್ದಾರೆ. ಆದರೆ ಇದುವರೆಗೂ ಅದರ ಬಗ್ಗೆ ಯಾವುದೇ ಅಧಿಕಾರಿಗಳು ಕಾಳಜಿ ತೋರಿಸುತ್ತಿಲ್ಲ. ಒಂದು ವರ್ಷದಿಂದ 63 ಕೆ.ವಿ., 100 ಕೆ.ವಿ., ಟ್ರಾನ್ಸ್‌ಫಾರ್ಮರ್‌ಗಳು ಇಲ್ಲದಾಗಿದೆ. ಅಲ್ಲಿ ಬೆಳೆಯನ್ನು ಹೇಗೆ ಬೆಳೆಯಬೇಕು? ಈಗ ಮಹಾಪೂರದೊಳಗೆ ಎಲ್ಲವೂ ಮುಳುಗಡೆಯಾಗಿವೆ. ಯಾವ ಏರಿಯಾದಲ್ಲಿ ಮಹಾಪೂರ ಇಲ್ಲ ಅಲ್ಲಿ ವಿದ್ಯುತ್‌ನ್ನು ಪಡೆದುಕೊಳ್ಳಬೇಕೆಂದರೆ ಅಲ್ಲಿಗೆ ಟ್ರಾನ್ಸ್‌ಫಾರ್ಮರ್‌ಗಳನ್ನು ಕೊಡುತ್ತಿಲ್ಲ. ಇದರ ಬಗ್ಗೆ ಗಮನ ಕೊಟ್ಟು ಕ್ರಮ ತೆಗೆದುಕೊಳ್ಳಬೇಕೆಂದು ನಮ್ಮ ಜಿಲ್ಲಾ ಉಸ್ತುವಾರಿ ಸಚಿವರಿಗೆ ಹಾಗು ಇಂಧನ ಸಚಿವರಿಗೆ ಹೇಳಿದರೂ ಕೂಡ ಕ್ರಮ ತೆಗೆದುಕೊಂಡಿಲ್ಲ. ಇಂಧನ ಸಚಿವರು ಏನು ಹೇಳಿದರೆಂದರೆ, ಬೆಂಗಳೂರಿನಲ್ಲಿ ಒಂದು ಮೀಟಿಂಗ್ ಮಾಡಿ ಚಿಕ್ಕೋಡಿಗೆ ಸಂಬಂಧಪಟ್ಟಂತೆ ಒಂದು ಮೀಟಿಂಗ್ ಮಾಡುತ್ತೇನೆ ಎಂದು ಹೇಳಿದ್ದರು. ಬಾಗಲಕೋಟೆ, ಚಿಕ್ಕೋಡಿ ಮತ್ತು ಬೆಳಗಾಂ ಬಗ್ಗೆ ಕ್ರಮ ತೆಗೆದುಕೊಳ್ಳುವುದಾಗಿ ಹೇಳಿದ್ದರು. ಬಾಗಲಕೋಟೆ ಮತ್ತು ಬಿಜಾಪುರದಲ್ಲಿ ಎರಡು ಮೀಟಿಂಗ್‌ಗಳಾದವು. ಆದರೆ ಚಿಕ್ಕೋಡಿಯಲ್ಲಿ ಮೀಟಿಂಗ್ ಆಗಲಿಲ್ಲ. ಅದಕ್ಕೇನು ಕಾರಣವೋ ನನಗೆ ಗೊತ್ತಾಗಲಿಲ್ಲ. 21ನೇ ತಾರೀಖಿಗೆ ಚಿಕ್ಕೋಡಿಯಲ್ಲಿ ಒಂದು ಮೀಟಿಂಗ್ ಮಾಡಿ ಆಮೇಲೆ ಇಲ್ಲಿ ಬೆಳಗಾಂನಲ್ಲಿ ಛೇರ್ಮನ್‌ರು, ಎಂ.ಡಿ., ಎಲ್ಲಾ ಅಧಿಕಾರಿಗಳಿಗೆ ಸೂಚನೆ ಕೊಟ್ಟಿದ್ದರು, ನೀವು ಅಲ್ಲೊಂದು ಮೀಟಿಂಗ್ ಮಾಡಿ ಸಮಸ್ಯೆ ಬಗೆಹರಿಸಿ ಎಂದಿದ್ದರು. ಆದರೆ ಇದುವರೆಗೆ ಆ ಸಮಸ್ಯೆ ಬಗೆಹರಿಸಿಲ್ಲ. ನಾವು ಅಧಿಕಾರಿಗಳ ಹತ್ತಿರ ಹೋಗಿ ಕೇಳಿದರೆ, ನಮ್ಮ ಹತ್ತಿರ ಟ್ರಾನ್ಸ್‌ಫಾರ್ಮರ್‌ಗಳು ಇಲ್ಲ, ಜಿಲ್ಲೆಯಿಂದ ನಮಗೆ ಹಣ ಬಿಡುಗಡೆಯಾಗಿಲ್ಲ, ಆ ದೃಷ್ಟಿಯಿಂದ ನಮಗೆ ರಿಪೇರಿ ಮಾಡುವುದಕ್ಕಾಗುವುದಿಲ್ಲ ಮತ್ತು ಹೊಸದಾಗಿ ಕೂಡ ಟ್ರಾನ್ಸ್‌ಫಾರ್ಮರ್‌ಗಳನ್ನು ಹಾಕುವುದಕ್ಕಾಗುವುದಿಲ್ಲ. ನಮ್ಮಲ್ಲಿ ದುಡ್ಡಿನ ಕೊರತೆ ಇದೆಯೆಂದು ಅಧಿಕಾರಿಗಳು ಹೇಳುತ್ತಿದ್ದಾರೆ. ಇದರ ಬಗ್ಗೆ ತಕ್ಷಣ ಏನು ಕ್ರಮ ತೆಗೆದುಕೊಳ್ಳುತ್ತೀರೆಂದು ಹೇಳಬೇಕು.

ಶ್ರೀ ಬಿ.ಎಸ್.ಹೊರಟ್ಟಿ (ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು):– ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರು ಹೇಳಿದಂತೆ 40

ಟ್ರಾನ್ಸ್‌ಫಾರ್ಮರ್‌ಗಳು ಮತ್ತು 100 ಕೆ.ವಿ, 16 ಟ್ರಾನ್ಸ್‌ಫಾರ್ಮರ್‌ಗಳು ಕಳೆದ ಒಂದು ವರ್ಷದಿಂದ ಸುಟ್ಟು ಹೋಗಿವೆಯೆಂದು ಏನು ಹೇಳಿದ್ದಾರೆ ಅದು ಒಂದು ವರ್ಷದಿಂದ ಅಲ್ಲ.

ಶ್ರೀ ಪ್ರಕಾಶ್ ಬಿ. ಹುಕ್ಕೇರಿ:– ಯಾವ ತಾರೀಖಿನಂದು ಟ್ರಾನ್ಸ್‌ಫಾರ್ಮರ್‌ಗಳು ಸುಟ್ಟಿವೆ ಹೇಳುತ್ತೇನೆ. ಒಂದು ವರ್ಷದಿಂದ ಅಲ್ಲವೆಂದು ತಾವು ಹೇಳುತ್ತೀರಿ. ಮಾನ್ಯ ಅಧ್ಯಕ್ಷರೆ, ಎರಡು 26.10.2006 ರಿಂದ ನನ್ನ ಕ್ಷೇತ್ರದಲ್ಲಿ ಯಾವ ಯಾವ ಟ್ರಾನ್ಸ್‌ಫಾರ್ಮರ್‌ಗಳು ಸುಟ್ಟಿವೆ ಎಂಬ ಬಗ್ಗೆ 40 ಟ್ರಾನ್ಸ್‌ಫಾರ್ಮರ್‌ಗಳ ಮಾಹಿತಿಗಳು ಇವೆ. ಇದರ ಪೂರ್ಣ ಮಾಹಿತಿಯನ್ನು ನಾನು ಮಾನ್ಯ ಸಚಿವರಿಗೆ ಒದಗಿಸುತ್ತೇನೆ. ಅದನ್ನು ನೋಡಿಕೊಂಡು ಅವರು ಹೇಳಬೇಕು.

ಅಧ್ಯಕ್ಷರು:– ಸರ್ಕಾರದ ಪರವಾಗಿ ಅವರು ಉತ್ತರ ಹೇಳುತ್ತಾರೆ. ಅವರು ಉತ್ತರ ಹೇಳುವುದಕ್ಕೆ ಬಿಡಿ.

ಶ್ರೀ ಪ್ರಕಾಶ್ ಬಿ.ಹುಕ್ಕೇರಿ:– ಮಾನ್ಯ ಅಧ್ಯಕ್ಷರೆ, ಅವರು ಹೇಳುತ್ತಿದ್ದಾರೆ ಒಂದು ವರ್ಷದಿಂದ ಸುಟ್ಟಿರುವುದಲ್ಲವೆಂದು ಹೇಳುತ್ತಾರೆ.

ಶ್ರೀ ಬಿ.ಎಸ್.ಹೊರಟ್ಟಿ:– ಆಯಿತು. ನೀವು ಮಾಹಿತಿ ಕಳುಹಿಸಿ. ಮಾನ್ಯ ಅಧ್ಯಕ್ಷರೆ, ನನಗೆ ಬಂದಿರುವ ಮಾಹಿತಿಯನ್ನು ಸಭೆಯ ಗಮನಕ್ಕೆ ತರುತ್ತೇನೆ. ಮಾನ್ಯ ಸದಸ್ಯರು ಏನು ಹೇಳಿದ್ದಾರೆಂದರೆ ಬಾಗಲಕೋಟೆ ಮತ್ತು ಚಿಕ್ಕೋಡಿಯಲ್ಲಿ ಮೀಟಿಂಗ್ ಮಾಡಬೇಕಾಗಿತ್ತು. ಬಿಜಾಪುರದಲ್ಲಿ ಮಾಡಿದ್ದಾರೆ. ಚಿಕ್ಕೋಡಿಯಲ್ಲಿ ಮಾಡಬೇಕಾಗಿತ್ತು. ಕಾರಣಾಂತರಗಳಿಂದ ಮಂತ್ರಿಗಳು ಈ ಕಡೆಗೆ ಬಂದರು ಆದರೆ ಅಧಿಕಾರಿಗಳಿಗೆ ನಿರ್ದೇಶನವನ್ನು ಕೊಟ್ಟಿದ್ದಾರೆ. ಅಧಿಕಾರಿಗಳು ಕೆಲಸ ಮಾಡುತ್ತಿದ್ದಾರೆ. ಇವರು ತಕ್ಷಣ ಅಲ್ಲಿ ಸರಿಪಡಿಸಬೇಕು ಎಂದು ಹೇಳಿದ್ದಾರೆ. ಈಗ ಮಳೆಗಾಲ ಇರುವುದರಿಂದ ಅದು ಆಗಿಲ್ಲ. ಆದರೆ ಅದನ್ನು ಸರಿಪಡಿಸುವುದಕ್ಕೆ ಅಧಿಕಾರಿಗಳಿಗೆ ನಿರ್ದೇಶನವನ್ನು ಕೊಟ್ಟಿದ್ದಾರೆ. ಆದರೂ ಸಹಿತ ಇಂಧನ ಸಚಿವರು ಅಧಿಕಾರಿಗಳನ್ನು ಕರೆಸಿ ಚರ್ಚೆ ಮಾಡಿ ತಕ್ಷಣ ಕ್ರಮ ತೆಗೆದುಕೊಳ್ಳಬೇಕು ಎಂದು ಹೇಳಿದ್ದಾರೆ. ಇವೊತ್ತೂ ಕೂಡ ನಾನು ಇಂಧನ ಸಚಿವರಿಗೆ ಈ ಬಗ್ಗೆ ಹೇಳುತ್ತೇನೆ. ಮಾನ್ಯ ಪ್ರಕಾಶ್ ಹುಕ್ಕೇರಿಯವರು ಹೇಳಿದಂಥ ಗಂಭೀರವಾದ ವಿಷಯಕ್ಕೆ ಸಂಬಂಧಪಟ್ಟಂತೆ

ತಕ್ಷಣ ಕ್ರಮ ತೆಗೆದುಕೊಳ್ಳಬೇಕೆನ್ನುವಂಥ ವಿಷಯವನ್ನು ಇಂಧನ ಸಚಿವರಿಗೆ ತಿಳಿಸುವಂಥ ಕೆಲಸವನ್ನು ನಾನು ಮಾಡುತ್ತೇನೆ.

(12) ವಿಷಯ: ಪದವಿ ಪೂರ್ವ ಕಾಲೇಜು ಕಟ್ಟಡ ಕುರಿತು.

ಶ್ರೀ ಪ್ರಕಾಶ್ ಬಿ.ಹುಕ್ಕೇರಿ: ನನ್ನದು ಇನ್ನೂ ಎರಡು ವಿಚಾರಗಳು ಇವೆ.

ಅಧ್ಯಕ್ಷರು: ನಾಳೆ ಅವಕಾಶ ಕೊಡುತ್ತೇನೆ. ಸಂಬಂಧಪಟ್ಟ ಮಂತ್ರಿಗಳು ಬರಲಿ. ಸುಮ್ಮನೆ ಇವರು ಓದುತ್ತಾರೆ, ಏನೂ ಪ್ರಯೋಜನವಾಗುವುದಿಲ್ಲ.

ಶ್ರೀ ಪ್ರಕಾಶ್ ಬಿ.ಹುಕ್ಕೇರಿ: ಮಾನ್ಯ ಅಧ್ಯಕ್ಷರೆ, ಪದವಿ ಪೂರ್ವ ಕಾಲೇಜು ಕಟ್ಟಡದ ಬಗ್ಗೆ ಮಾನ್ಯ ಹೊರಟ್ಟಿಯವರ ಇಲಾಖೆಗೆ ಬರುತ್ತದೆ. ನಾವು 2006–2007ರಲ್ಲಿ ಅನುದಾನವನ್ನು ಬಿಡುಗಡೆ ಮಾಡಿಕೊಟ್ಟಿದ್ದೇವೆ. ಮೂರು ಪದವಿ ಪೂರ್ವ ಕಾಲೇಜಿಗೆ 25–25 ಲಕ್ಷ ರೂಪಾಯಿಯಂತೆ ನಾವು ಹಣವನ್ನು ಮಂಜೂರು ಮಾಡಿ ಕೊಟ್ಟಿದ್ದೇವೆ. ಅದು 2006–2007ರ ಆಯವ್ಯಯದಲ್ಲಿ ಬಂದಿದೆ. ಆದರೆ ಇನ್ನೂ ಕೂಡ ಲೋಕೋಪಯೋಗಿ ಇಲಾಖೆಯ ಅಧಿಕಾರಿಗಳು tender ಕರೆದು ಕಾಲೇಜು ಕಟ್ಟಡದ ಕೆಲಸವನ್ನು ಪ್ರಾರಂಭ ಮಾಡಿಲ್ಲ. ಅಲ್ಲಿ ಕಟ್ಟಡವನ್ನು ಕಟ್ಟುವುದಕ್ಕೆ ಜಮೀನು ಕೊಟ್ಟಿದ್ದೇವೆ. ಅವರಿಗೆ ಅವಶ್ಯಕತೆಗೆ ಬೇಕಾದಂತಹ ಎಲ್ಲಾ ದಾಖಲೆಗಳನ್ನು ಪೂರೈಸಿದ್ದೇವೆ. ಇವತ್ತು ಮಾನ್ಯ ಹೊರಟ್ಟಿಯವರು ರಾಜ್ಯದಲ್ಲಿ ಪ್ರೌಢಶಾಲೆಗಳು ಮತ್ತು ಪದವಿ ಪೂರ್ವ ಕಾಲೇಜುಗಳನ್ನು ಕೊಡುತ್ತಿದ್ದಾರೆ, ಅದನ್ನು ನಾವು ಸ್ವಾಗತ ಮಾಡುತ್ತೇವೆ.

ಶ್ರೀ ಕೆ. ಶ್ರೀನಿವಾಸಗೌಡ: ಅದನ್ನು ರೇವಣ್ಣನವರು ಕೊಡುತ್ತಿರುವುದು.

ಶ್ರೀ ಪ್ರಕಾಶ್ ಬಿ.ಹುಕ್ಕೇರಿ: ಅದು ನಮಗೆ ಗೊತ್ತಿಲ್ಲ. ನೀವು ಏನು ಹೇಳಿದರೂ ಕೂಡ ನಾವು ಮಾತ್ರ ಹೊರಟ್ಟಿಯವರು ಕೊಟ್ಟಿರುವುದು ಎಂದು ಹೇಳುತ್ತೇವೆ. ನೀವು ಯಾರ ಹೆಸರು ಹೇಳಿದರೂ ನಾವು ಒಪ್ಪುವುದಿಲ್ಲ. ಅವರಿಂದ ರುಜು ಆಗಿದೆ ಎಂದರೆ ನಾವು ಹೊರಟ್ಟಿಯವರೆ ಮಾಡಿದ್ದಾರೆಂದು ಹೇಳುತ್ತೇವೆ. ನೀವು ರಾಜಕೀಯವಾಗಿ ಏನಾದರೂ ಹೇಳಿಕೊಳ್ಳಿ. ಅದು